# ***ಕರ್ನಾಟಕ ಸರ್ಕಾರ***

***ಸಂಖ್ಯೆ***: ಇಡಿ 44 ಎಸ್‌ಎಲ್‌ಬಿ 2007(ಭಾಗ)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 03-9-2007.

## ***ಸುತ್ತೋಲೆ***

***ವಿಷಯ :*** ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ಮತ್ತು ನೋಂದಣಿ) ನಿಯಮಗಳು,, 1997ರಡಿ ಖಾಸಗಿ ಶಾಲೆಗಳನ್ನು ನೋಂದಾಯಿಸುವ ಸಲುವಾಗಿ (ಅಂದರೆ, ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವುದಕ್ಕೆ) ಮಾನ್ಯತೆ ನವೀಕರಿಸುವ ಸಲುವಾಗಿ ಹಾಗೂ ಖಾಸಗಿ ಪದವಿ ಪೂರ್ವ ಕಾಲೇಜುಗಳ ನೋಂದಣಿ ಮಾಡುವ ಮತ್ತು ಮಾನ್ಯತೆ ನವೀಕರಿಸುವ ಸಲುವಾಗಿ ಉಪಯೋಗಿಸಬೇಕಾದ ಚೆಕ್‌ಲಿಸ್ಟ್‌ಗಳನ್ನು ನಿಗದಿಪಡಿಸುವ ಬಗ್ಗೆ.

***-0-***

1.1 ***ಖಾಸಗಿ ಶಾಲೆಗಳನ್ನು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ನೋಂದಾಯಿಸುವ ಬಗ್ಗೆ:-***

ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ 31 ರಿಂದ 33ರನ್ವಯ ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನೋಂದಾಯಿಸುವ ಕುರಿತು ಉಪಬಂಧಗಳನ್ನು ಕಲ್ಪಿಸಲಾಗಿದೆ. ಅಂತಹ ಸಂಸ್ಥೆಗಳನ್ನು ನೋಂದಾಯಿಸುವ ಪೂರ್ವದಲ್ಲಿ ಸಂಬಂಧಿಸಿದ ನೋಂದಣಾ ಪ್ರಾಧಿಕಾರ ಪಾಲಿಸಬೇಕಾದ ಮಾನದಂಡ ಗಳನ್ನು ಸದರಿ ಅಧಿನಿಯಮದ ಸೆಕ್ಷನ್ 31ರ ಉಪ ಸೆಕ್ಷನ್ (2)ರನ್ವಯ ನಿಗದಿಪಡಿಸಿದ್ದು, ಅದನ್ನು ಈ ಕೆಳಗೆ ಉದ್ಧರಿಸಿದೆ :-

"(2) (1)ನೇ ಉಪ ಪ್ರಕರಣದ ಮೇರೆಗೆ ಒಂದು ಸಂಸ್ಥೆಯ ನೋಂದಣಿಯನ್ನು ಮಾಡಿಕೊಳ್ಳುವಾಗ, ನೋಂದಣಿ ಪ್ರಾಧಿಕಾರವು,

(ಎ) ಆ ಸ್ಥಳದ ಜನರಿಗೆ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವ ಅಗತ್ಯವಿದೆ ಅಥವಾ ಆ ಸಂಸ್ಥೆಯು ಒದಗಿಸಲು ಉದ್ದೇಶಿಸಿರುವ ಬಗೆಯ ಶಿಕ್ಷಣದ ಅಗತ್ಯವಿದೆ ಎಂಬ ಬಗ್ಗೆ;

(ಬಿ) ಸಕ್ಷಮ ಪ್ರಾಧಿಕಾರವು ನಿಯಮಿಸಿದ ರೀತಿಯಲ್ಲಿ ಸಂಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಿ ಮುಂದುವರೆಸಿಕೊಂಡು ಹೋಗಲು ಸಾಕಷ್ಟು ಹಣಕಾಸಿನ ಏರ್ಪಾಡು ಇದೆ ಎಂಬ ಬಗ್ಗೆ;

(ಸಿ) ಸಂಸ್ಥೆಯನ್ನು ನಿರ್ಮಲ ಮತ್ತು ಆರೋಗ್ಯಕರವಾದ ಪರಿಸರದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ ಎಂಬ ಬಗ್ಗೆ;

(ಡಿ) ಒದಗಿಸಲು ಉದ್ದೇಶಿಸಲಾದ ಕಟ್ಟಡದ ನಿವೇಶನ, ಆಟದ ಮೈದಾನ ಹಾಗೂ ನಿಯಮಿಸಲಾದ ನಿಯಗಳಿಗನುಸಾರವಾಗಿವೆ ಎಂಬ ಬಗ್ಗೆ;

(ಇ) ರಾಜ್ಯ ಸರ್ಕಾರವು ವಿದ್ಯಾರ್ಹತೆಯ ಬಗ್ಗೆ ರಚಿಸಿದ ನಿಯಮಗಳಿಗನುಸಾರ ಅರ್ಹರಾದ ಬೋಧಕ ಸಿಬ್ಬಂದಿ ವರ್ಗವನ್ನು ನೇಮಕ ಮಾಡಿಕೊಳ್ಳಲಾಗಿದೆ ಅಥವಾ ಮಾಡಿಕೊಳ್ಳಲಾಗುವುದು ಎಂಬ ಬಗ್ಗೆ; ಮತ್ತು

(ಎಫ್) ಅರ್ಜಿಯಲ್ಲಿ ಒದಗಿಸಿದ ವಿವರಗಳು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ಆದೇಶಗಳ ಮೂಲಕ ಗೊತ್ತುಪಡಿಸಿದ ಅವಶ್ಯಕತೆಗಳಿಗೆ ಅನುಗುಣವಾಗಿವೆ ಎಂಬ ಬಗ್ಗೆ.

ಯುಕ್ತ ಗಮನವನ್ನು ನೀಡತಕ್ಕದ್ದು."

1.2. ಅದೇ ರೀತಿ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ಮತ್ತು ನೋಂದಣಿ) ನಿಯಮಗಳು, 1997ರ ನಿಯಮ 4ರ ಉಪ ನಿಯಮ (1)ರನ್ವಯ , ನೋಂದಾಯಿಸಲು ಉದ್ದೇಶಿಸಿದ ಶಿಕ್ಷಣ ಸಂಸ್ಥೆಯ ಅಗತ್ಯತೆಯ ಬಗ್ಗೆ ನೋಂದಣಾ ಪ್ರಾಧಿಕಾರ ಪರಿಗಣಿಸಬೇಕಾದ ಮಾನದಂಡವನ್ನು ನಿಗದಿಪಡಿಸಲಾಗಿದೆ. ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ತೆರೆಯುವ / ನೋಂದಾಯಿಸುವುದಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತ್ಯಾದಿ) ನಿಯಮಗಳು, 2006ರ ನಿಯಮ 4 ಮತ್ತು 5ರನ್ವಯ, ಕಾರ್ಯ ವಿಧಾನವನ್ನು ಹಾಗೂ ಅದಕ್ಕಾಗಿ, ಅಂದರೆ, ನೋಂದಾಯಿಸುವ ಸಲುವಾಗಿ, ಸಕ್ಷಮ ಪ್ರಾಧಿಕಾರ ಪರಿಗಣಿಸಬೇಕಾದ ಮಾನದಂಡವನ್ನು, ನಿಗದಿಪಡಿಸಲಾಗಿದೆ. ಅದನ್ನು ಪರಿಗಣಿಸುವುದರ ಜೊತೆಯಲ್ಲಿ, ನೋಂದಣಿ ಮಾಡಲು ಉದ್ದೇಶಿಸಿದ

ಶಾಲೆಗೆ/ಪದವಿ ಪೂರ್ವ ಕಾಲೇಜಿಗೆ ಸಂಬಂಧಿಸಿದಂತೆ ನಿಗದಿತ ಸಿಬ್ಬಂದಿ ಮಾದರಿಯ ಪ್ರಕಾರ ಭೋದಕ/ಭೋದಕೇತರ ಸಿಬ್ಬಂದಿಯನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನ ಇಲ್ಲದ ಪ್ರಾಥಮಿಕ ಮತ್ತು ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005ರನ್ವಯ ನಿಗದಿತ ವಿದ್ಯಾರ್ಹತೆ ಹೊಂದಿರುವವರನ್ನೇ ನೇಮಕ ಮಾಡಲಾಗುವುದೆಂದು ಹಾಗೂ ಅವರಿಗೆ, ಆ ನಿಯಮಗಳನ್ವಯ ದೊರಕಿಸಬೇಕಾದ ಸೇವಾ ಸೌಲಭ್ಯಗಳನ್ನು ಲಭ್ಯ ಮಾಡಲಾಗುವುದೆಂದು ಮುಚ್ಚಳಿಕೆ ಪತ್ರವನ್ನು ಸಂಬಂಧಿಸಿದ ಸಂಸ್ಥೆ ನೋಟರಿಯ ಮುಂದೆ ಪ್ರಮಾಣೀಕರಿಸಿ ನೋಂದಣಾ ಪ್ರಾಧಿಕಾರಕ್ಕೆ ನೀಡತಕ್ಕದ್ದು.

1.3. ಮೇಲೆ ಉಲ್ಲೇಖಿಸಲಾದ ಮಾನದಂಡವನ್ನು ಪೂರೈಸದೇಯಿರುವ ಖಾಸಗಿ ಶಾಲೆಗಳನ್ನು ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ನೋಂದಣಾ ಪ್ರಾಧಿಕಾರಗಳು ನೋಂದಣಿ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ಈ ಲೋಪವನ್ನು ಸರ್ಕಾರ ಗಭೀರವಾಗಿ ಪರಿಗಣಿಸಿ, ಅದನ್ನು ತಪ್ಪಿಸುವ ಸಲುವಾಗಿ ನೋಂದಣಿಗಾಗಿ ಸ್ವೀಕರಿಸುವ ಅರ್ಜಿಗಳನ್ನು ಸಂಪೂರ್ಣ ಮಾಹಿತಿಯೊಂದಿಗೆ ಪಡೆಯಲು ಅನುವಾಗಲು ಹಾಗೂ ಅವುಗಳನ್ನು ಏಕರೂಪವಾಗಿ ಹಾಗೂ ವ್ಯಾಪಕವಾಗಿ ಪರಿಶೀಲಿಸಲು ಸಹ ಅನುವಾಗಲು ಉಪಯೋಗಿಸಬೇಕಾದ ಚೆಕ್‌ಲಿಸ್ಟ್‌ಗಳ ನಮೂನೆಗಳನ್ನು ***ಅನುಬಂಧ-1***ನ್ನಾಗಿ ಮತ್ತು ***ಅನುಬಂಧ-2***ನ್ನಾಗಿ ನಿಗದಿಪಡಿಸಿ, ಈ ಸುತ್ತೋಲೆಗೆ ಲಗತ್ತಿಸಿದೆ. ***ಅನುಬಂಧ-1***ರಲ್ಲಿನ ಚೆಕ್‌ಲಿಸ್ಟ್ ಖಾಸಗಿ ಶಾಲೆಗಳ ನೊಂದಣಿಗೆ ಸಂಬಂಧಿಸಿದೆ. ***ಅನುಬಂಧ-2***ರಲ್ಲಿನ ಚೆಕ್ ಲಿಸ್ಟ್ ಖಾಸಗಿ ಪದವಿ ಪೂರ್ವ ಕಾಲೇಜುಗಳ ನೋಂದಣಿಗೆ ಸಂಬಂಧಿಸಿದೆ. ಆ ಚೆಕ್‌ಲಿಸ್ಟ್‌ಗಳಿಗೆ ಲಗತ್ತಿಸಿದ ***ಪಟ್ಟಿ-1*** ಮತ್ತು ***ಪಟ್ಟಿ-2***ರ ನಮೂನೆಗಳಲ್ಲಿ, ಸಂಬಂಧಿಸಿದ ಖಾಸಗಿ ಶಾಲೆ / ಪದವಿ ಪೂರ್ವ ಕಾಲೇಜು ಹೊಂದಿರುವ ಮೂಲಭೂತ ಸೌಲಭ್ಯಗಳ ಮೌಲ್ಯಮಾಪನ ಮಾಡಬೇಕಾದ ಅಂಶ ಒಳಗೊಂಡಿದೆ. ಮೂಲಭೂತ ಸೌಲಭ್ಯಗಳ ಮೌಲ್ಯಮಾಪನ ಮಾಡಲು ಸಂಬಂಧಿಸಿದ ಪ್ರಾಧಿಕಾರಗಳು ತಪಾಸಣಾ ತಂಡಗಳನ್ನು ರಚಿಸಿ ಕಳುಹಿಸಬೇಕು. ಖಾಸಗಿ ಶಾಲೆಗಳಿಗೆ ಸಂಬಂಧಿಸಿದಂತೆ ***ಪಟ್ಟಿ-1***ರ ನಮೂನೆಯನ್ನು ಉಪಯೋಗಿಸತಕ್ಕದ್ದು. ಖಾಸಗಿ

ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ***ಪಟ್ಟ-2***ರ ನಮೂನೆಯನ್ನು ಉಪಯೋಗಿಸತಕ್ಕದ್ದು. ಅದರನ್ವಯ ನಿಗದಿಪಡಿಸಿದ ಕನಿಷ್ಠ 60 ಅಂಕಗಳನ್ನು ಪಡೆಯುವ ಖಾಸಗಿ ಶಾಲೆಗಳನ್ನು / ಪದವಿ ಪೂರ್ವ ಕಾಲೇಜು ಗಳನ್ನು ಮಾತ್ರ ನೋಂದಾಯಿಸಬಹುದು. ಅದಕ್ಕಿಂತ ಕಡಿಮೆ ಅಂಕಗಳನ್ನು ಪಡೆಯುವ ಶಾಲೆಗಳನ್ನು ನೋಂದಾಯಿಸತಕ್ಕದ್ದಲ್ಲ. ನೋಂದಣಾ ಪ್ರಾಧಿಕಾರಗಳು ಸದರಿ ನಮೂನೆಗಳನ್ನು ಉಪಯೋಗಿಸ ಬೇಕೆಂದು ಈ ಮೂಲಕ ಸೂಚಿಸಿದೆ.

1.4. **ಮೇಲೆ ಉಲ್ಲೇಖಿಸಲಾದ, ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ಮತ್ತು ನೋಂದಣಿ) ನಿಯಮಗಳು, 1997 ರನ್ವಯ ನಿಗದಿಪಡಿಸಿದ ನಮೂನೆ-1ರಲ್ಲಿ ಸಂಬಂಧಿಸಿದ ಖಾಸಗಿ ಸಂಸ್ಥೆ, ನೋಂದಣಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವುದರ ಜೊತೆಗೆ, ಈ ಸುತ್ತೋಲೆಗೆ ಲಗತ್ತಿಸಿದ *<u>ಅನುಬಂಧ-1</u>*ರಲ್ಲಿನ ಚೆಕ್‌ಲಿಸ್ಟ್‌ನ ನಮೂನೆಯಲ್ಲಿಯೂ ಸಹ ಮಾಹಿತಿಯನ್ನು ನೀಡತಕ್ಕದ್ದು.**

2.1. ***<u>ಖಾಸಗಿ ಶಾಲೆಗಳ ಮತ್ತು ಪದವಿ ಪೂರ್ವ ಕಾಲೇಜುಗಳ ಮಾನ್ಯತೆ ನವೀಕರಣ</u>***:- ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ 36ರಿಂದ 39ರನ್ವಯ ಖಸಗಿ ಶಿಕ್ಷಣ ಸಂಸ್ಥೆಗಳ ಮಾನ್ಯತೆಗೆ ಸಂಬಂಧಿಸಿದಂತೆ ಉಪಬಂಧಗಳನ್ನು ಕಲ್ಪಿಸಲಾಗಿದೆ. ಅದರಡಿಯಲ್ಲಿ, ರಚಿಸಲಾದ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಾನ್ಯತೆ) ನಿಯಮಗಳು, 1999ರ ನಿಯಮ 4ರನ್ವಯ, ಮಾನ್ಯತೆ ಪಡೆಯಲು ಆಯಾಯಾ ಶಾಲೆ ಅರ್ಹವಾಗಲು ಸಂಬಂಧಿಸಿದ ಖಾಸಗಿ ಶಿಕ್ಷಣ ಸಂಸ್ಥೆ ಪೂರೈಸಬೇಕಾದ ಮಾನದಂಡವನ್ನು ನಿಗದಿಪಡಿಸಲಾಗಿದೆ. ನಿಯಮ 4ರ ಉಪ ನಿಯಮ (2)ರನ್ವಯ, ಮಾನ್ಯತೆ ಕೋರುವ ಖಾಸಗಿ ಶಿಕ್ಷಣ ಸಂಸ್ಥೆ ನೀಡಬೇಕಾದ ಮುಚ್ಚಳಿಕೆಗೆ ಸಂಬಂಧಿಸಿದ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಲಾಗಿದೆ. ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ ಆಡಳಿತ ಮತ್ತು ಸಹಾಯಾನುದಾನ ಇತ್ಯಾದಿ) ನಿಯಮಗಳು, 2006ರ ನಿಯಮ 7ರನ್ವಯ, ಮಾನ್ಯತೆ ಪಡೆಯಲು ಅರ್ಹವಾಗಲು, ಸಂಬಂಧಿಸಿದ ಖಾಸಗಿ ಪದವಿ ಪೂರ್ವ ಕಾಲೇಜು ಪೂರೈಸಬೇಕಾದ ಮಾನದಂಡವನ್ನು

ನಿಗದಿಪಡಿಸಲಾಗಿದೆ. ಸದರಿ ಉಪಬಂಧಗಳನ್ನು ಆಧಾರಿಸಿ ತಯಾರಿಸಲಾದ, ಖಾಸಗಿ ಶಾಲೆಗಳ ಮಾನ್ಯತೆಗೆ ಸಂಬಂಧಿಸಿದಂತೆ ಚೆಕ್‌ಲಿಸ್ಟಿನ ನಮೂನೆ ***ಅನುಬಂಧ-3***ರಲ್ಲಿದೆ. ಖಾಸಗಿ ಪದವಿ ಪೂರ್ವ ಕಾಲೇಜುಗಳ ಮಾನ್ಯತೆಗೆ ಸಂಬಂಧಿಸಿದಂತೆ, ಚೆಕ್‌ಲಿಸ್ಟಿನ ನಮೂನೆ ***ಅನುಬಂಧ-4*** ರಲ್ಲಿದೆ. ಆ ಚೆಕ್‌ಲಿಸ್ಟ್‌ಗಳಿಗೆ ಲಗತ್ತಿಸಿದ ***ಪಟ್ಟಿ-1*** ಮತ್ತು ***ಪಟ್ಟಿ-2***ರ ನಮೂನೆಗಳಲ್ಲಿ, ಸಂಬಂಧಿಸಿದ ಖಾಸಗಿ ಶಾಲೆ / ಪದವಿ ಪೂರ್ವ ಕಾಲೇಜು ಹೊಂದಿರುವ ಮೂಲಭೂತ ಸೌಲಭ್ಯಗಳ ಮೌಲ್ಯಮಾಪನ ಮಾಡಬೇಕಾದ ಅಂಶ ಒಳಗೊಂಡಿದೆ. ಖಾಸಗಿ ಶಾಲೆಗಳಿಗೆ ಸಂಬಂಧಿಸಿದಂತೆ ***ಪಟ್ಟಿ-1***ರ ನಮೂನೆಯನ್ನು ಉಪಯೋಗಿಸತಕ್ಕದ್ದು. ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ***ಪಟ್ಟಿ-2***ರ ನಮೂನೆಯನ್ನು ಉಪಯೋಗಿಸತಕ್ಕದ್ದು. ಅದರನ್ವಯ ನಿಗದಿಪಡಿಸಿದ ಕನಿಷ್ಠ 60 ಅಂಕಗಳನ್ನು ಪಡೆಯುವ ಖಾಸಗಿ ಶಾಲೆಗಳನ್ನು / ಪದವಿ ಪೂರ್ವ ಕಾಲೇಜುಗಳನ್ನು ಮಾತ್ರ ಮಾನ್ಯತೆ ನವೀಕರಣ ನೀಡಿ, ಅದಕ್ಕಿಂತ ಕಡಿಮೆ ಅಂಕಗಳನ್ನು ಪಡೆಯುವ ಶಾಲೆ / ಪದವಿ ಪೂರ್ವ ಕಾಲೇಜುಗಳಿಗೆ ಮಾನ್ಯತೆ ನವೀಕರಣ ನೀಡತಕ್ಕದ್ದಲ್ಲ. ಮಾನ್ಯತೆ ನೀಡುವ ಸಕ್ಷಮ ಪ್ರಾಧಿಕಾರಗಳು ಸದರಿ ನಮೂನೆಗಳನ್ನು ಉಪಯೋಗಿಸಬೇಕೆಂದು ಈ ಮೂಲಕ ಸೂಚಿಸಿದೆ.

3. **ಮೇಲೆ ಉಲ್ಲೇಖಿಸಲಾದ, ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಾನ್ಯತೆ) ನಿಯಮಗಳು, 1999 ರನ್ವಯ ನಿಗದಿಪಡಿಸಿದ ನಮೂನೆ-1ರಲ್ಲಿ ಸಂಬಂಧಿಸಿದ ಖಾಸಗಿ ಸಂಸ್ಥೆ, ಆಯಾಯಾ ಶಾಲೆಯ ಮಾನ್ಯತೆಯ ನವೀಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡುವುದರ ಜೊತೆಗೆ, ಈ ಸುತ್ತೋಲೆಗೆ ಲಗತ್ತಿಸಿದ *ಅನುಬಂಧ-3*ರಲ್ಲಿನ ಚೆಕ್‌ಲಿಸ್ಟ್‌ನ ನಮೂನೆಯಲ್ಲಿಯೂ ಸಹ ಮಾಹಿತಿಯನ್ನು ನೀಡತಕ್ಕದ್ದು.**

4. ನಿಗದಿತ ಮಾನದಂಡದನ್ವಯ ಅರ್ಹತೆ ಹೊಂದದೇ ಇರುವ ಖಾಸಗಿ ಶಾಲೆಗಳನ್ನು / ಪದವಿ ಪೂರ್ವ ಕಾಲೇಜುಗಳನ್ನು ನೋಂದಣಿ ಮಾಡುವ ಹಾಗೂ ಅದೇ ರೀತಿ, ನಿಗದಿತ ಮಾನದಂಡದನ್ವಯ

ಅರ್ಹತೆ ಹೊಂದದೇ ಇರುವ ಖಾಸಗಿ ಶಾಲೆಗಳಿಗೆ / ಪದವಿ ಪೂರ್ವ ಕಾಲೇಜುಗಳಿಗೆ ಮಾನ್ಯತೆ ನೀಡುವ ಸಕ್ಷಮ ಪ್ರಾಧಿಕಾರಗಳ ವಿರುದ್ಧ ಕರ್ತವ್ಯ ಚ್ಯುತಿಯ (dereliction of duty) ಆರೋಪದ ಮೇಲೆ ಸಂಬಂಧಿಸಿದ ಆಯುಕ್ತರು ಶಿಸ್ತಿನ ಕ್ರಮ ತೆಗೆದುಕೊಳ್ಳತಕ್ಕದ್ದೆಂದು ಈ ಮೂಲಕ ಸೂಚಿಸಿದೆ.

***(ತ.ಮ. ವಿಜಯ ಭಾಸ್ಕರ್)***
ಸರ್ಕಾರದ ಕಾರ್ಯದರ್ಶಿ,
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)
ಶಿಕ್ಷಣ ಇಲಾಖೆ.

***ಗೆ:***

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರು ಈ ಸುತ್ತೋಲೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 1000 ಪ್ರತಿಗಳನ್ನು ಶಿಕ್ಷಣ ಇಲಾಖೆಯ ಪ್ರೌಢ ಶಿಕ್ಷಣ-ಎ ಶಾಖೆಗೆ ಒದಗಿಸಬೇಕೆಂದು ಕೋರಿದೆ.

***ಪ್ರತಿ:***

1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
2) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.
3) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
4) ನಿರ್ದೇಶಕರು(ಪ್ರಾಥಮಿಕ ಶಿಕ್ಷಣ),ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
5) ನಿರ್ದೇಶಕರು(ಪ್ರೌಢ ಶಿಕ್ಷಣ),ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
6) ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.
7) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಂಟಿ / ಉಪ ನಿರ್ದೇಶಕರುಗಳು / ಕ್ಷೇತ್ರ ಶಿಕ್ಷಣಾಧಿಕಾರಿಗಳು.
8) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ.
9) ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆರವರ ಆಪ್ತ ಕಾರ್ಯದರ್ಶಿ.
10) ಎಲ್ಲಾ ಸಹ / ಉಪ / ಅಧೀನ ಕಾರ್ಯದರ್ಶಿಗಳು / ಶಾಖಾಧಿಕಾರಿಗಳು.
11) ವಾರ್ಷಿಕ ಸಂಕಲನ (Annual Compendium).
(12) ಶಾಖಾ ರಕ್ಷಾ ಕಡತ .

8)   ಟಿಪ್ಪಣಿಯನ್ನು ಮುಂದುವರೆಸಿದೆ.  ಈ ಕುರಿತು ಭಾಗ ಕಡತದಲ್ಲಿ  ಕರಡು ಸುತ್ತೋಲೆಯನ್ನು ತಯಾರಿಸಿ, ಇಡಲಾಗಿದೆ.  ಅದರ ಕುರಿತು ಚರ್ಚಿಸಲು ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನೂ ಸಹ ಕರೆಯಲಾಗಿದೆ.  ಆ ಭಾಗ ಕಡತವನ್ನು ಈ ಮುಖ್ಯ ಕಡತದೊಂದಿಗೆ  ವಿಲೀನಗೊಳಿಸಿ.

***(ಅಬ್ದುಲ್ ಖದೀರ್)***
ಸರ್ಕಾರದ ಅಪರ ಕಾರ್ಯದರ್ಶಿ-2,
(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ)
ಶಿಕ್ಷಣ ಇಲಾಖೆ.

ಅ.ಕಾ.(ಪ್ರೌಢ)]

20) ಈ ಕಡತವನ್ನು ಚರ್ಚೆಗಾಗಿ ತೆಗೆದುಕೊಂಡು ಬರಲು ಕಾರ್ಯದರ್ಶಿಯವರು ಮೌಖಿಕವಾಗಿ ಸೂಚಿಸಿದರು. ಆದುದರಿಂದ, ಕಡತವನ್ನು ಶಾಖೆಯಿಂದ ಪಡೆಯಲಾಯಿತು. ಕಾರ್ಯದರ್ಶಿಯವರೊಡನೆ ಚರ್ಚಿಸಲಾಯಿತು.

21) ಮಾನ್ಯ ಸಚಿವರ ಕಂಡಿಕೆ-15ರಲ್ಲಿನ ಅವಲೋಕನೆಗಳನ್ನು ಉಲ್ಲೇಖಿಸಿ, ಈ ಕೆಳಕಂಡ ಅಂಶಗಳನ್ನು ಮಾನ್ಯ ಸಚಿವರ ಗಮನಕ್ಕೆ ತಂದು, ಕಂಡಿಕೆ-8ಕ್ಕೆ ಮಾನ್ಯ ಸಚಿವರ ಅನುಮೋದನೆ ಕೋರಲು ಕಾರ್ಯದರ್ಶಿಯವರು ಸೂಚಿಸಿದರು:-

(1) ಡಿ.ಇಡಿ. ಮತ್ತು ಡಿ.ಪಿ.ಇಡಿ ಕೋರ್ಸುಗಳಿಗೆ ದಾಖಲಾತಿಗಾಗಿ ಪರಿಷ್ಕೃತ ಹೊಸ ನಿಯಮಗಳನ್ನು ತಯಾರಿಸಲು ಕಡತ ಸಂಖ್ಯೆ: ಇಡಿ 233 ಪಿಟಿಐ 2006ರಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಕಡತದಲ್ಲಿ ಪರಿಶೀಲಿಸಲಾಗುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾಪಿತ ಕರಡು ನಿಯಮಗಳಲ್ಲಿ ಈ ಕೆಳಕಂಡಂತೆ ಉಪಬಂಧ ಕಲ್ಪಿಸಲು ಪ್ರಸ್ತಾಪಿಸಲಾಗಿದೆ:-

"(7) For the seats remaining vacant even after allotment and counseling, further counseling shall be done by selecting candidates from out of the remaining candidates on the basis of their merit under the category in which vacancies exist. The process shall be continued till all the vacant seats are filled up in all the categories under Government seats, until the list of eligible candidates is exhausted or till the date specified by the Government;

(8) Seats still remaining vacant even after completing the process referred to in sub rules (1) to (7), and sub rule (3) of rule 4 may be filled by the management concerned after the cell issues common circular to this effect. An institution which has refused admission to any candidate allotted by the cell shall not be allowed to fill up the vacant seats. Such seats shall be treated as unfilled seats for that academic year."

ಮೇಲಿನಂತೆ ಉಪಬಂಧವನ್ನು ಕಲ್ಪಿಸಿದ ನಂತರ, ಘಟನೋತ್ತರ ಅನುಮೋದನೆ ನೀಡುಬೇಕಾದ ಇಂತಹ ಪ್ರಸಂಗ ಉದ್ಭವಿಸುವುದಕ್ಕೆ ಆಸ್ಪದವಾಗುವುದಿಲ್ಲ.

(2) ಎರಡನೆಯದಾಗಿ, ಪ್ರಸ್ತುತ ಜಾರಿಯಲ್ಲಿರುವ 2002ರ ದಾಖಲಾತಿ ನಿಯಮಗಳಲ್ಲಿ ಈ ಕೆಳಕಂಡಂತೆ ಆಸ್ಪದ ಇರುತ್ತದೆ:-

> "…….Seats still remaining vacant shall be filled up by management only if the Government issues specific orders or otherwise such vacant seats shall cease to exist for that particular academic year. Management shall not fill up such seats thereafter………….."

ಅದರಂತೆ, ಕೇಂದ್ರೀಕೃತ ದಾಖಲಾತಿ ಘಟಕದಿಂದ ದಿನಾಂಕ 20-1-2007ರಂದು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿತು(ಪುಟ-62). ಅದರ ಕುರಿತು ಸರ್ಕಾರಕ್ಕೆ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಇವರ ದಿನಾಂಕ 12-3-2007ರ ಪತ್ರದ ಮೂಲಕ (ಪುಟ 70-69) ಅವರ ಅಭಿಪ್ರಾಯ ತಿಳಿಸಿದರು. ಅದನ್ನು ಒಪ್ಪಿಕೊಂಡು ಅದಕ್ಕೆ ಮಾನ್ಯ ಸಚಿವರ ಅನುಮೋದನೆ ಕೋರಲಾಯಿತು. ಈ ರೀತಿ ಈ ವಿಷಯ ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ. ಇಂತಹ ವಿಳಂಬವನ್ನು ತಪ್ಪಿಸುವ ಸಲುವಾಗಿ, ಮೇಲೆ ಉಲ್ಲೇಖಿಸಿದಂತೆ ತಿದ್ದುಪಡಿ ಮಾಡಲು ಉದ್ದೇಶಿಸಿದೆ. ಅದರ ಪ್ರಕಾರ ಈ ಕಾರ್ಯವನ್ನು ಕೇಂದ್ರೀಕೃತ ದಾಖಲಾತಿ ಘಟಕದ ಹಂತದಲ್ಲಿ ಪೂರ್ಣಗೊಳಿಸಲು ಆಸ್ಪದವಾಗುತ್ತದೆ.

(3) ಮೂರನೆಯದಾಗಿ, ಸರ್ಕಾರದ ಆದೇಶಕ್ಕೆ ಕಾಯದೆ ಸಂಬಂಧಿಸಿದ ಖಾಸಗಿ ಶಿಕ್ಷಣ ಸಂಸ್ಥೆಗಳು ಡಿ.ಇಡಿ 2006-2007ನೇ ಸಾಲಿನ ಖಾಲಿ ಉಳಿದಿರುವ ಸರ್ಕಾರದ ಕೋಟಾ ಸೀಟುಗಳನ್ನು ತುಂಬಲು ಕಾರಣ, ಹಾಜರಾತಿ ಕೊರತೆಯನ್ನು ತಪ್ಪಿಸುವುದಾಗಿದೆ. ಇದಲ್ಲದೆ, ಅನುದಾನರಹಿತ ಡಿ.ಇಡಿ. ಕಾಲೇಜುಗಳನ್ನು ನಡೆಸುವ ಖರ್ಚನ್ನು ಭರಿಸಲು ಅಭಿವೃದ್ಧಿ ಶುಲ್ಕ ಇತ್ಯಾದಿ ಪಡೆಯಲು ಅಂತಹ ದಾಖಲಾತಿಗಳನ್ನು ಮಾಡುವುದು ಆಯಾಯಾ ಸಂಸ್ಥೆಯ ಹಿತದೃಷ್ಟಿಯಿಂದ ಅನಿವಾರ್ಯವಾಗಿರಬಹುದು.

22) ಕಂಡಿಕೆ-21ರ ಹಿನ್ನೆಲೆಯಲ್ಲಿ, ಕಂಡಿಕೆ-8ಕ್ಕೆ ಅನುಮೋದನೆ ಕೋರಿ, ಈ ಕಡತವನ್ನು ಮಾನ್ಯ ಸಚಿವರಿಗೆ ಮರುಮಂಡಿಸಲು ಒಪ್ಪಿಸಿದೆ.

***(ಅಬ್ದುಲ್ ಖದೀರ್)***
ಸರ್ಕಾರದ ಅಪರ ಕಾರ್ಯದರ್ಶಿ-2,
(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ)
ಶಿಕ್ಷಣ ಇಲಾಖೆ.

ಸರ್ಕಾರದ ಕಾರ್ಯದರ್ಶಿಗಳು,

ಶಿಕ್ಷಣ ಇಲಾಖೆ(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ).]

***ಸಂಖ್ಯೆ: ಇಡಿ 44 ಎಸ್‌ಎಲ್‌ಬಿ 2007***

---

28) ಕಂಡಿಕೆ-27ರನ್ವಯ ಕಾರ್ಯದರ್ಶಿಯವರು ಸೂಚಿಸಿದಂತೆ ಕ್ರಮ ತೆಗೆದುಕೊಂಡು ಮರು ಒಪ್ಪಿಸಿದೆ. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ಮತ್ತು ನೋಂದಣಿ) ನಿಯಮಗಳು, 1997ರಡಿ ಖಾಸಗಿ ಶಾಲೆಗಳನ್ನು ನೋಂದಾಯಿಸುವ ಸಲುವಾಗಿ (ಅಂದರೆ, ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವುದಕ್ಕೆ) ಮಾನ್ಯತೆ ನವೀಕರಿಸುವ ಸಲುವಾಗಿ ಹಾಗೂ ಖಾಸಗಿ ಪದವಿ ಪೂರ್ವ ಕಾಲೇಜುಗಳ ನೋಂದಣಿ ಮಾಡುವ ಮತ್ತು ಮಾನ್ಯತೆ ನವೀಕರಿಸುವ ಸಲುವಾಗಿ ಉಪಯೋಗಿಸಬೇಕಾದ ಚೆಕ್‌ಲಿಸ್ಟ್‌ಗಳನ್ನು ನಿಗದಿಪಡಿಸುವ ವಿಷಯ ಪ್ರಸ್ತುತ ಪರಿಶೀಲನೆಯಲ್ಲಿದೆ. ಅದರ ಕುರಿತು ಹೊರಡಿಸಬಹುದಾದ ಕರಡು ಸುತ್ತೋಲೆಯನ್ನು (ಪುಟ 73-41) ಈ ಹಿಂದೆ ತಯಾರಿಸಿ ಮಂಡಿಸಿದ್ದು, ಅದರ ಕುರಿತು ದಿನಾಂಕ 26-7-2007ರಂದು ಕಾರ್ಯದರ್ಶಿಯವರ ಕೊಠಡಿಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯಲ್ಲಿ ಈ ಕೆಳಕಂಡ ಅಧಿಕಾರಿಗಳು ಹಾಜರಿದ್ದರು:-

(1) ಸರ್ಕಾರದ ಕಾರ್ಯದರ್ಶಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ;

(2) ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ;

(3) ನಿರ್ದೇಶಕರು, (ಪ್ರೌಢ ಶಿಕ್ಷಣ), ಸಾ.ಶಿ.ಇ. ಬೆಂಗಳೂರು;

(4) ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ), ಸಾ.ಶಿ.ಇ. ಬೆಂಗಳೂರು;

(5) ಪದವಿ ಪೂರ್ವ ಶಿಕ್ಷಣ ಆಯುಕ್ತಾಲಯದ ಜಂಟಿ ನಿರ್ದೇಶಕರು, ಬೆಂಗಳೂರು.

ಮೇಲಿನ ಕ್ರಮ ಸಂಖ್ಯೆ: (3),(4) ಮತ್ತು (5)ರಲ್ಲಿನ ಅಧಿಕಾರಿಗಳು ಲಿಖಿತವಾಗಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಲಹೆಗಳನ್ನು ನೀಡಿದ್ದು, ಸಾರ್ವಜನಿಕ ಶಿಕ್ಷಣ ಇಲಾಖೆ ನೀಡಿದ ಸಲಹೆಗಳು ಪುಟ 84-73ರಲ್ಲಿದೆ. ಅದೇ ರೀತಿ, ಪದವಿ ಪೂರ್ವ ಶಿಕ್ಷಣ ಇಲಾಖೆ ನೀಡಿದ ಸಲಹೆಗಳು ಪುಟ 86-85ರಲ್ಲಿದೆ. ಅದನ್ನು ಪರಿಶೀಲಿಸಿ, ಸ್ವೀಕಾರಾರ್ಹವಿರುವ ಸಲಹೆಗಳ ಪ್ರಕಾರ ಪರಿಷ್ಕರಿಸಿದ ಕರಡು ಸುತ್ತೋಲೆಯನ್ನು (ಪುಟ 126-87) ಅನುಮೋದನೆಗಾಗಿ ಮಂಡಿಸಿದೆ.

29) ಕಂಡಿಕೆ-28ರಲ್ಲಿ ಉಲ್ಲೇಖಿಸಿದ, ಖಾಸಗಿ ಶಾಲೆಗಳ ಮತ್ತು ಪದವಿ ಪೂರ್ವ ಕಾಲೇಜುಗಳ ನೋಂದಣಿ ಮತ್ತು ಮಾನ್ಯತೆಗೆ ಸಂಬಂಧಿಸಿದ ವಿಷಯಗಳನ್ನು ಹೊರತುಪಡಿಸಿ, ಈ ಕೆಳಕಂಡ ವಿಷಯಗಳ ಬಗ್ಗೆಯೂ ಸಹ ಚೆಕ್‌ಲಿಸ್ಟ್‌ಗಳನ್ನು ತಯಾರಿಸಬೇಕೆಂದು ಕಾರ್ಯದರ್ಶಿಯವರು ಮೌಖಿಕವಾಗಿ ಸೂಚಿಸಿರುತ್ತಾರೆ:-

(1) ದಿನಾಂಕ 1-6-1987ರಿಂದ 1992-93ರ ಅವಧಿಯಲ್ಲಿ ಪ್ರಾರಂಭಿಸಲಾದ ಖಾಸಗಿ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಕುರಿತು ಚೆಕ್‌ಲಿಸ್ಟ್;

(2) ಖಾಸಗಿ ಶಾಲೆಗಳ ಮತ್ತು ಪದವಿ ಪೂರ್ವ ಕಾಲೇಜುಗಳ ಸ್ಥಳಾಂತರ ಹಾಗೂ ಹಸ್ತಾಂತರಕ್ಕೆ ಸಂಬಂಧಿಸಿದಂತೆ, ಇತ್ತೀಚೆಗೆ ನಿಯಮಗಳನ್ನು ರಚಿಸಲಾಗಿದ್ದು, ಅದರನ್ವಯ ನಿಗದಿಪಡಿಸಬಹುದಾದ ಚೆಕ್‌ಲಿಸ್ಟ್;

(3) ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ 67ರಡಿಯಲ್ಲಿ ಶಿಕ್ಷಣ ಸಂಸ್ಥೆಗಳ ಆಡಳಿತವನ್ನು ಸಾರ್ವಜನಿಕ ಹಿತಾಸಕ್ತಿಯಿಂದ ವಹಿಸಿಕೊಳ್ಳಲು ವಿಶೇಷಾಧಿಕಾರಿಯನ್ನು ನೇಮಿಸುವ ಕುರಿತು ಚೆಕ್‌ಲಿಸ್ಟ್;

(4) ಅನುದಾನರಹಿತ ಹಾಗೂ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿಗೆ ಸಂಬಂಧಿಸಿದ ಚೆಕ್‌ಲಿಸ್ಟ್;

(5) ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ 94ರ ಉಪ ಸೆಕ್ಷನ್ (5)ರಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವ ಅಪೀಲಿನ ಕುರಿತು ಚೆಕ್‌ಲಿಸ್ಟ್;

(6) ಅನುದಾನರಹಿತ ಹಾಗೂ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ರಾಜೀನಾಮೆಗೆ ಸಂಬಂಧಿಸಿದ ಚೆಕ್‌ಲಿಸ್ಟ್;

(7) ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಹೆಚ್ಚುವರಿ ಶಿಕ್ಷಕರನ್ನು ಕಾರ್ಯಭಾರವಿರುವ ಇತರೆ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಹಂಚುವ ಕುರಿತು ಚೆಕ್‌ಲಿಸ್ಟ್;

(8) ಖಾಸಗಿ ಕಟ್ಟಡಗಳನ್ನು ಸರ್ಕಾರಿ ಕಛೇರಿಗಳಿಗಾಗಿ ಬಾಡಿಗೆಗಾಗಿ ತೆಗೆದುಕೊಳ್ಳುವ ಬಗ್ಗೆ ಚೆಕ್‌ಲಿಸ್ (ಕರ್ನಾಟಕ ಆರ್ಥಿಕ ಸಂಹಿತೆ, 1958 ಇತ್ಯಾದಿ ಉಪಬಂಧಗಳನ್ವಯ) ;

(9) ವೈದ್ಯಕೀಯ ವೆಚ್ಚ ಮರು ಪಾವತಿ ಬಗ್ಗೆ;

(10) ವರ್ಗಾವಣೆ ಅವಧಿಯಲ್ಲಿ ವೈದ್ಯಕೀಯ ರಜೆ ಮಂಜೂರಾತಿ;

(11) ಕಡ್ಡಾಯ ನಿರೀಕ್ಷಣಾವಧಿ ಘೋಷಣೆ;

(12) ಉನ್ನತ ವ್ಯಾಸಂಗಕ್ಕೆ ಆಯ್ಕೆ/ನಿಯೋಜನೆ;

(13) ಪಾಸ್‌ಪೋರ್ಟ್ ಪಡೆಯಲು ಎನ್.ಒ.ಸಿ. ನೀಡಲು;

(14) ಕಾಲಬದ್ಧ ಮುಂಬಡ್ತಿ ನೀಡಲು(10 ವರ್ಷದ, 15 ವರ್ಷದ ಮತ್ತು 20 ವರ್ಷದ);

(15) ವಿದೇಶ ಪ್ರಯಾಣ;

(16) ತರಬೇತಿ;

(17) ಸ್ವ ಇಚ್ಛಾ ನಿವೃತ್ತಿ;

(18) ಖಾಯಂಪೂರ್ವ ಸೇವಾವಧಿ ಘೋಷಣೆ;

(19) ಪ್ರಭಾರ ಭತ್ಯೆ;

(20) ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ;

(21) ಇಲಾಖಾ ಪರಾಮರ್ಶಕ ಸಮಿತಿ ಸಭೆಯಲ್ಲಿ ಪರಿಶೀಲಿಸಬೇಕಾದ ಅಂಶಗಳು;ಮತ್ತು

(22) ಮುಂದೆ ಗುರುತಿಸಬಹುದಾದ ಇತರೆ ವಿಷಯಗಳ ಬಗ್ಗೆ ಚೆಕ್‌ಲಿಸ್ಟ್.

ಆಯಾಯಾ ಕ್ಷೇತ್ರ ಇಲಾಖೆಯಲ್ಲಿನ ಮೊದಲನೆಯ ಹಂತದಲ್ಲಿ, ಉದಾಹರಣೆಗೆ, ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಗಳ ಹಂತದಲ್ಲಿ ತಯಾರಿಸಿ ಮಂಡಿಸಲಾದ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಅಥವಾ ಕಛೇರಿಯಲ್ಲಿನ ಸಹಾಯಕರು (ಗುಮಾಸ್ತರು) ಮಂಡಿಸುವ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ, ಮೇಲಿನ ಅಧಿಕಾರಿಗಳು ಹೆಚ್ಚುವರಿ ಮಾಹಿತಿ ಕೇಳುವುದಕ್ಕೆ ಆಸ್ಪದ ನೀಡದೇ, ಸಂಪೂರ್ಣ ಪ್ರಸ್ತಾವನೆಗಳನ್ನು ತಯಾರಿಸಿ ಮಂಡಿಸಲು, ಸದರಿ ಚೆಕ್‌ಲಿಸ್ಟ್‌ಗಳ ಬಳಕೆಯಿಂದ ಆಸ್ಪದವಾಗುತ್ತದೆ. ಈ ರೀತಿ ಚೆಕ್‌ಲಿಸ್ಟ್‌ಗಳ ಬಳಕೆಯಿಂದ ಅಪೂರ್ಣವಾದ ಪ್ರಸ್ತಾವನೆಗಳನ್ನು ಕಳುಹಿಸುವುದನ್ನು ಹಾಗೂ ಅನಗತ್ಯವಾಗಿ ಮಾಹಿತಿ / ಸ್ಪಷ್ಟೀಕರಣಗಳನ್ನು ಕೇಳುವುದನ್ನು ತಪ್ಪಿಸಿ, ತ್ವರಿತವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳಲು ಅನುಕೂಲವಾಗುತ್ತದೆ. ಈ ಹಿನ್ನೆಲೆಯಲ್ಲಿ, ಸದರಿ ವಿಷಯಗಳಿಗೆ ಸಂಬಂಧಿಸಿದಂತೆ, ಚೆಕ್‌ಲಿಸ್ಟ್‌ಗಳನ್ನು ತಯಾರಿಸುವ ಕಾರ್ಯವನ್ನು ನಿವೃತ್ತ ಅಧಿಕಾರಿಗಳ ತಂಡವನ್ನು ರಚಿಸಿ, ಅದಕ್ಕೆ ವಹಿಸಬಹುದು.

30) ಕಂಡಿಕೆ-28ರಲ್ಲಿ ಉಲ್ಲೇಖಿಸಿದ ಕರಡು ಸುತ್ತೋಲೆಯನ್ನು (ಪುಟ 126-87) ಹೊರಡಿಸಲು ಹಾಗೂ ಕಂಡಿಕೆ-29ರಲ್ಲಿನ ಸಲಹೆಗೆ ಅನುಮೋದನೆ ಕೋರಿದೆ.

*(ಅಬ್ದುಲ್ ಖದೀರ್)*
ಸರ್ಕಾರದ ಅಪರ ಕಾರ್ಯದರ್ಶಿ-2,
(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ)
ಶಿಕ್ಷಣ ಇಲಾಖೆ.

ಸರ್ಕಾರದ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ).]

(1) ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನ ರಹಿತ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005ರ ನಿಯಮ 3ರಂತೆ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿನ ಆಯಾಯಾ ಹುದ್ದೆಗೆ ನೇಮಕಾತಿಗಾಗಿ ನಿಗದಿಪಡಿಸಲಾದ ವಿದ್ಯಾರ್ಹತೆಯೇ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಆಯಾಯಾ ಹುದ್ದೆಗೆ ನೇಮಕಾತಿಗಾಗಿಯೂ ಅನ್ವಯವಾಗುತ್ತದೆ. ನೋಂದಾಯಿಸಲು ಉದ್ದೇಶಿಸಿದ ಖಾಸಗಿ ಶಾಲೆಯ / ಪದವಿ ಪೂರ್ವ ಕಾಲೇಜಿನ ನೌಕರರು ಅದರಂತೆ ನಿಗದಿತ ವಿದ್ಯಾರ್ಹತೆಯನ್ನು ಹೊಂದಿದ್ದಾರೆಯೇ? ಎಂಬುವುದನ್ನು ಪರಿಶೀಲಿಸಿ, ಆ ವಿದ್ಯಾರ್ಹತೆಯನ್ನು ಅವರು ಹೊಂದಿದ್ದಲ್ಲಿ ಮಾತ್ರ ನೋಂದಣಿ ಮಾಡಬಹುದು; ಮತ್ತು

(2) ಮೇಲೆ (1)ರಲ್ಲಿ ಉಲ್ಲೇಖಿಸಲಾದ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನ ರಹಿತ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005ರನ್ವಯ, ಅನುದಾನ ಇಲ್ಲದ (unaided) ಶಿಕ್ಷಣ ಸಂಸ್ಥೆಗಳ ನೌಕರರಿಗೆ ಸಂಬಂಧಿಸಿದಂತೆ ನಿಗದಿಪಡಿಸಲಾದ ಈ ಕೆಳಕಂಡ ಸೇವಾ ಷರತ್ತುಗಳನ್ನು ಅದರ ನೌಕರರಿಗೆ ಲಭ್ಯಮಾಡಲಾಗಿದೆಯೇ? ಎಂಬುವುದನ್ನು ಪರಿಶೀಲಿಸಿ, ಅದನ್ನು ಲಭ್ಯ ಮಾಡಿದ್ದಲ್ಲಿ ಮಾತ್ರ ನೋಂದಣಿ ಮಾಡಬಹುದು:-

(ಅ) ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿನ ಆಯಾಯಾ ಹುದ್ದೆಗೆ ನೇಮಕಾತಿಗಾಗಿ ನಿಗದಿಪಡಿಸಲಾದ ವಿದ್ಯಾರ್ಹತೆಯೇ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಆಯಾಯಾ ಹುದ್ದೆಗೆ ನೇಮಕಾತಿಗಾಗಿಯೂ ಅನ್ವಯವಾಗುತ್ತದೆ. ನೋಂದಾಯಿಸಲು ಉದ್ದೇಶಿಸಿದ ಖಾಸಗಿ ಶಾಲೆಯ / ಪದವಿ ಪೂರ್ವ ಕಾಲೇಜಿನ ನೌಕರರು ಅದರಂತೆ ನಿಗದಿತ ವಿದ್ಯಾರ್ಹತೆಯನ್ನು ಹೊಂದಿರುವ ಬಗ್ಗೆ;

(ಆ) ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿನ ಆಯಾಯಾ ಹುದ್ದೆಗಳಿಗೆ ನಿಗದಿಪಡಿಸಲಾದ ವೇತನ ಶ್ರೇಣಿಯೇ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಆಯಾಯಾ ಹುದ್ದೆಗೆ ಅನ್ವಯವಾಗುತ್ತದೆ. ಆ ವೇತನ ಶ್ರೇಣಿಯ ಕನಿಷ್ಠ ಹಂತದಲ್ಲಿ ವೇತನವನ್ನು

ನೀಡುವ ಬಗ್ಗೆ ಹಾಗೂ ವೇತನದ ಮೊತ್ತವನ್ನು ಕ್ರಾಸ್ಡ್ ಚೆಕ್ ಮೂಲಕ ಸಂಬಂಧಿಸಿದ ನೌಕರನ ಬ್ಯಾಂಕ್ ಖಾತೆಗೆ ಜಮಾ ಮಾಡುವ ಬಗ್ಗೆ;

(ಇ) ಸದರಿ ನಿಯಮಗಳ ನಿಯಮ 4ರಂತೆ ಸಂಬಂಧಿಸಿದ ನೌಕರನ ರಜಾ ಖಾತೆಯಲ್ಲಿ ರಜೆಯನ್ನು ಜಮಾ ಮಾಡುವ ಬಗ್ಗೆ;

(ಈ) ಮಹಿಳಾ ನೌಕರರಿಗೆ ಸಂಬಂಧಿಸಿದಂತೆ, Maternity Benefits Act, 1961 (Central Act 53 of 1961)ರ ಪ್ರಕಾರ ಪ್ರಸೂತಿ ರಜೆ ನೀಡುವ ಬಗ್ಗೆ;

(ಉ) ಸದರಿ ನಿಯಮಗಳ ನಿಯಮ 5ರಂತೆ ಲಿಖಿತ ನೇಮಕಾತಿ ಆದೇಶವನ್ನು ನೀಡುವ ಬಗ್ಗೆ, ಪ್ರತಿಯೊಬ್ಬ ನೌಕರನಿಗೆ ಸಂಬಂಧಿಸಿದಂತೆ ಸೇವಾ ಪುಸ್ತಕವನ್ನು ಹಾಗೂ Schedule of Employment, ಇವುಗಳನ್ನು ನಿರ್ವಹಿಸುವ ಬಗ್ಗೆ ;

(ಊ) ಸದರಿ ನಿಯಮಗಳ ನಿಯಮ 6ರನ್ವಯ ನಿಷೇಧಿಸಿದಂತೆ, ನೇಮಕಾತಿಯ ಸಮಯದಲ್ಲಿಯೇ ಯಾವುದೇ ದಿನಾಂಕ ನಮೂದಿಸದೇ ರಾಜೀನಾಮೆ ಪತ್ರವನ್ನು ಪಡೆಯದೇಯಿರುವ ಬಗ್ಗೆ ಹಾಗೂ ಅಂತಹ ಪತ್ರವನ್ನು ನೀಡಬೇಕೆಂದು ಸಂಬಂಧಿಸಿದ ನೌಕರನನ್ನು ಒತ್ತಾಯಿಸದೇಯಿರುವ ಬಗ್ಗೆ